# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 48, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## 99ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2026ನೇ ಸಾಲಿನ 3ನೇ ಸಭೆಯ ನಡಾವಳಿಗಳು

ದಿನಾಂಕ : ಶನಿವಾರ, 30–05–2026

ಸಮಯ : ಪೂರ್ವಾಹ್ನ 11 : 00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **99 ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2026ನೇ ಸಾಲಿನ 3ನೇ ಸಭೆಯನ್ನು** ದಿನಾಂಕ 30 ಮೇ 2026 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

**I. ಹಾಜರಿದ್ದ ಸದಸ್ಯರು**

| | |
|---|---|
| 1. ಪ್ರೊ. ಸಿ. ಎಂ. ತ್ಯಾಗರಾಜ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. ಡಾ. ಸುಷ್ಮಾ.ಆರ್. | ಸದಸ್ಯರು |
| 3. ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. ಶ್ರೀಮತಿ(ಡಾ) ಸುನೀತಾ ಅಂಗಡಿ | ಸದಸ್ಯರು |
| 6. ಡಾ. ನೀಲಪ್ಪಾ ಬಿ ಹೊಸಮನಿ | ಸದಸ್ಯರು |
| 7. ಡಾ. ಎಂ. ಮಹೇಶ | ಸದಸ್ಯರು |
| 8. ಶ್ರೀ ರಾಮಚಂದ್ರ ಜಿ ಕಿಲ್ಲೆದಾರ | ಸದಸ್ಯರು |
| 9. ಶ್ರೀ. ರಫೀ ಭಂಡಾರಿ | ಸದಸ್ಯರು |
| 10. ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 11. ಡಾ. ಮಹಾಂತೇಶ ಕಂಬಾರ | ಸದಸ್ಯರು |
| 12. ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 13. ಪ್ರೊ.(ಶ್ರೀಮತಿ) ವ್ಹಿ ಎಸ್. ಶಿಗೇಹಳ್ಳಿ | ಸದಸ್ಯರು |
| 14. ಪ್ರೊ. ಡಿ. ಎನ್. ಪಾಟೀಲ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್. | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**II. ಹಾಜರಾಗದ ಸದಸ್ಯರು:**

| | |
|---|---|
| 1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 6. ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 7. ಡಾ. ಕಾವೇರಿ ಎಚ್.ಎಂ. | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** 30 ಮೇ 2026 ರಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 99ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 3ನೇ ಸಿಂಡಿಕೇಟ್ ಸಭೆಯ ನಡುವಳಿಗಳು

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27) (28) (2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 09.03.2026.

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 18.05.2026.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2) ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 99 ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 3 ನೇ ಸಿಂಡಿಕೇಟ್ ಸಭೆಯನ್ನು ದಿನಾಂಕ: 30.05.2026 ರಂದು ಪೂರ್ವಾಹ್ನ 11.00 ಗಂಟೆಗೆ ಸಿಂಡಿಕೇಟ್ ಸಭಾಂಗಣ, ರಾಚವಿ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಕರ್ನಾಟಕ ರಾಜ್ಯದಲ್ಲಿ 08 ವರ್ಷಗಳವರೆಗೆ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿ, ಇತ್ತೀಚಿಗೆ ರಾಜೀನಾಮೆ ನೀಡಿರುವ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ರಾಜ್ಯಕ್ಕೆ ನೀಡಿರುವ ಕೊಡುಗೆ ಕುರಿತು ಸ್ಮರಿಸಿ ಮಾನ್ಯರಿಗೆ ಧನ್ಯವಾದ ತಿಳಿಸಿದರು. ಉನ್ನತ ಶಿಕ್ಷಣ ಸಚಿವರಾಗಿದ್ದ ಶ್ರೀ ಎಂ.ಸಿ. ಸುಧಾಕರ ಇವರು ಅಪರೂಪದ ವ್ಯಕ್ತಿಯಾಗಿದ್ದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಬೆನ್ನೆಲುಬಾಗಿ ಕಾರ್ಯನಿರ್ವಹಿಸಿರುತ್ತಾರೆ. ವಿಶೇಷವಾಗಿ ಘಟಿಕೋತ್ಸವ ಮತ್ತು ಪ್ರಸ್ತುತ ಭೂತರಾಮನಹಟ್ಟಿ ಜಮೀನನ್ನು ವಿಶ್ವವಿದ್ಯಾಲಯದ ಸ್ವಾಧೀನದಲ್ಲಿ ಪಡೆಯುವ ವಿಷಯಕ್ಕೆ ಮಾನ್ಯರು ನೀಡಿರುವ ಸಹಕಾರವನ್ನು ಸ್ಮರಿಸಿದರು. ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಈರಣ್ಣ ಹಪ್ಪಲಿ ಮತ್ತು ಶ್ರೀ ವಿನೀತ ಜೋಶಿ ಇವರುಗಳು ಜೂನ-2026 ಕ್ಕೆ ಸದಸ್ಯರಾಗಿ ಕಾರ್ಯನಿರ್ವಹಿಸಿ 03 ವರ್ಷಗಳು ಪೂರ್ಣಗೊಳ್ಳುವುದರಿಂದ ಸದರಿ ಸದಸ್ಯರುಗಳ ಕೊಡುಗೆಗಳನ್ನು ಸ್ಮರಿಸಿ ಅಭಿನಂದನೆ ತಿಳಿಸಿದರು. ಸನ್ಮಾನ್ಯ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು ಹಾಗೂ ರಾಜ್ಯದ ಕುಲಪತಿಗಳ ಉಪಸ್ಥಿತಿಯಲ್ಲಿ ಜರುಗಿದ Career to Campus ಸಭೆಯಲ್ಲಿ ಭಾಗವಹಿಸಿದ್ದು, ಸದರಿ ಸಭೆಯಲ್ಲಿ ಗುಣಾತ್ಮಕ ಪಠ್ಯಕ್ರಮ ಮತ್ತು ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲು ತಿಳಿಸಿರುತ್ತಾರೆ ಎಂದರು. ಮುಂದುವರೆದು, ವಿಶ್ವವಿದ್ಯಾಲಯದ ನೂತನ ಕಟ್ಟಡದ ಪ್ರಸ್ತುತ ಹಂತದಲ್ಲಿರುವ ಪ್ರಗತಿ ಕುರಿತಾಗಿ ಸಭೆಗೆ ಮಾಹಿತಿ ನೀಡಿದರು.

## ಶೂನ್ಯ ಅವಧಿ ಚರ್ಚೆಗಳು

**ಶ್ರೀ ರಫೀ ಭಂಡಾರಿ:**

1. ತಿಡಗುಂದಿ ಸರ್ಕಾರಿ ಮಹಾವಿದ್ಯಾಲಯದಲ್ಲಿ ಅಧ್ಯಯನ ನಡೆಸುತ್ತಿದ್ದ ಓರ್ವ ವಿದ್ಯಾರ್ಥಿಗೆ ಪರೀಕ್ಷಾ ಪ್ರವೇಶ ಪತ್ರ(Hall Ticket) ನೀಡದೇ ಇರುವುದಕ್ಕೆ ವಿದ್ಯಾರ್ಥಿಯ ಒಂದು ವರ್ಷದ ಶೈಕ್ಷಣಿಕ ಅವಧಿ ನಷ್ಟವಾಗಿರುತ್ತದೆ . ಕಾರಣ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದು.
2. ಡಾ. ಎ.ಜಿ.ಪಿ. ಅಬ್ದುಲ್ ಕಲಾಂ ಇವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಲು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸದರಿ ಅಧ್ಯಯನ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ಪ್ರತಿಷ್ಠಿತ ಗಣ್ಯರಿಂದ ನೆರವೇರಿಸುವುದು ಮತ್ತು ಈಗಾಗಲೇ ನಿಗದಿಪಡಿಸಲಾಗಿರುವ ಒಟ್ಟು ರೂ.5 ಲಕ್ಷಗಳ ಅನುದಾನವನ್ನು ಹೆಚ್ಚಿಸುವುದು.
3. ವಿಜಯಪುರದಲ್ಲಿನ ಮಹಾವಿದ್ಯಾಲಯಗಳನ್ನು "Skill Development Schooling" ನಲ್ಲಿ ಒಳಪಡಿಸುವುದು.
4. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿವಿಧ ಮಾರ್ಗದರ್ಶಕರ ಅಡಿಯಲ್ಲಿ ಅಧ್ಯಯನ ನಡೆಸುತ್ತಿರುವ ಮತ್ತು ಈಗಾಗಲೇ ತೇರ್ಗಡೆ ಹೊಂದಿದ ಅಲ್ಪಸಂಖ್ಯಾತ ಸಂಶೋಧನಾರ್ಥಿಗಳ ಪಟ್ಟಿ ನೀಡುವುದು.

**ಡಾ. ಮಹಾಂತೇಶ ಕಂಬಾರ:**

1. 2023-24ನೇ ಸಾಲಿನ ಮರುಮೌಲ್ಯಮಾಪನದಲ್ಲಿನ ಒಂದು ಪ್ರಕರಣವನ್ನು ಪರಿಗಣಿಸಿ, ಮೊದಲನೇ ಮೌಲ್ಯಮಾಪನದಲ್ಲಿ ಕೇವಲ 2 ಅಂಕಗಳನ್ನು ನೀಡಲಾಗಿದ್ದು, ಫಲಿತಾಂಶದಿಂದ ಅಸಮಾಧಾನಗೊಂಡ ವಿದ್ಯಾರ್ಥಿಯು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿ ಅದೇ ಉತ್ತರ ಪತ್ರಿಕೆಗೆ 46 ಅಂಕಗಳು ದೊರೆತಿವೆ ಅಂದರೆ 44 ಅಂಕಗಳಷ್ಟು ಹೆಚ್ಚಳ ಕಂಡು ಬಂದಿದೆ ಎಂದು ತಿಳಿಸಿದರು. ಮುಂದುವರೆದು, ಇದಕ್ಕೆ ಸಂಬಂಧಿಸಿದಂತೆ ಉತ್ತರ ಪತ್ರಿಕೆಗಳ ಕುರಿತು ಪರೀಕ್ಷಾ ವಿಭಾಗದ ಸಿಬ್ಬಂದಿಗಳಿಗೆ ವಿಚಾರಿಸಿದಾಗ 2023-24 ನೇ ಸಾಲಿನ ಉತ್ತರ ಪತ್ರಿಕೆಗಳನ್ನು ಸಿಂಡಿಕೇಟ್ ಸಭೆ ತೀರ್ಮಾನದಂತೆ 06 ತಿಂಗಳುಗಳ ನಂತರ ಉತ್ತರ ಪತ್ರಿಕೆಗಳನ್ನು ವಿಲೇವಾರಿ ಮಾಡಲಾಗಿದೆ ಎಂದು ಉತ್ತರಿಸಿರುತ್ತಾರೆ. ಕಾರಣ, ತಪ್ಪಿತಸ್ಥ ಉತ್ತರ ಪತ್ರಿಕೆ ಮೌಲ್ಯಮಾಪಕರನ್ನು ಕಪ್ಪು ಪಟ್ಟಿಗೆ ಸೇರಿಸುವುದು ಅಥವಾ ದಂಡ ವಿಧಿಸಲು ಆಗ್ರಹಿಸಿದರು.
2. ಪರೀಕ್ಷಾ ಸುಧಾರಣಾ ಕ್ರಮವಾಗಿ Digital Mode ನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ವಿತರಿಸುವುದು.
3. PM-Usha ರಡಿಯಲ್ಲಿ ಆಯೋಜಿಸಲಾಗಿರುವ ಕಾರ್ಯಕ್ರಮಗಳ ಕುರಿತಾಗಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸಂಕ್ಷಿಪ್ತ ಮಾಹಿತಿ ವಿವರ ಒದಗಿಸುವುದು.
4. ಬೇಡಿಕೆ ಇರುವ Foreign Language Course ಗಳನ್ನು Online ನಲ್ಲಿ ಪ್ರಾರಂಭಿಸುವುದು.

**ಕುಲಸಚಿವರು(ಮೌಲ್ಯಮಾಪನ):**

1. ಮಹಾವಿದ್ಯಾಲಯದ ಪ್ರಾಂಶುಪಾಲರು ಪ್ರವೇಶ ಪತ್ರ(Hall Ticket)ಕ್ಕೆ Online (UUCMS) ನಲ್ಲಿ ಅನುಮೋದನೆ ನೀಡದೇ ಇರುವುದಕ್ಕೆ ಪ್ರವೇಶ ಪತ್ರ(Hall Ticket) ಪ್ರಕಟವಾಗಿರುವುದಿಲ್ಲ(Generate). ಪರೀಕ್ಷಾ ಸಂದರ್ಭದಲ್ಲಿ ಈ ತರಹದ ಪ್ರಕರಣಗಳು ಸಂಭವಿಸಿದ್ದು, ಸಂಬಂಧಿಸಿದಂತೆ ಕೆಲವು ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ 03 ಬಾರಿ ನೆನಪೋಲೆ ಹೊರಡಿಸಿ ಪ್ರವೇಶ ಪತ್ರ(Hall

Ticket) ಕ್ಕೆ Online ನಲ್ಲಿ ಅನುಮೋದನೆ ನೀಡಿ, ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಆದಾಗ್ಯೂ ತಿಡಗುಂದಿ ಸರ್ಕಾರಿ ಮಹಾವಿದ್ಯಾಲಯದ ಪ್ರಾಂಶುಪಾಲರ ನಿರ್ಲಕ್ಷದಿಂದ ವಿದ್ಯಾರ್ಥಿಯ ಒಂದು ವರ್ಷದ ಶೈಕ್ಷಣಿಕ ಅವಧಿ ನಷ್ಟವಾಗಿರುತ್ತದೆ ಎಂದರು.

2. ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ, ಮರುಮೌಲ್ಯಮಾಪನ ಅಂಕಗಳಲ್ಲಿ ಶೇ. 15 ಕ್ಕಿಂತ ಹೆಚ್ಚಿಗೆ ವ್ಯತ್ಯಾಸ ಕಂಡು ಬಂದರೆ ಮೊದಲ ಮೌಲ್ಯಮಾಪನಕರಿಗೆ ರೂ. 1000/-ಗಳ ದಂಡ ವಿಧಿಸುವ ಪರಿನಿಯಮ ಇರುತ್ತದೆ. ಸದರಿ ಪರಿನಿಯಮವನ್ನು ಪಾಲಿಸಲಾಗುತ್ತದೆ ಎಂದರು
3. ದಿನಾಂಕ: 30.03.2017 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಉತ್ತರ ಪತ್ರಿಕೆಗಳನ್ನು 06 ತಿಂಗಳ ಅವಧಿ ನಂತರ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದ್ದು ಅದರಂತೆ ಕ್ರಮವಹಿಸಲಾಗುತ್ತಿದೆ ಎಂದರು.

ಸದಸ್ಯರುಗಳು ತಿಳಿಸಿದ ಅಭಿಪ್ರಾಯಗಳ ಕುರಿತು ಚರ್ಚಿಸಿದ ಸಭೆಯು ಈ ಕೆಳಕಾಣಿಸಿದಂತೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

1. ಡಾ. ಎ.ಜಿ.ಪಿ. ಅಬ್ದುಲ್ ಕಲಾಂ ಅಧ್ಯಯನ ಕೇಂದ್ರಕ್ಕೆ ಈ ಹಿಂದಿನ ಸಭೆಯಲ್ಲಿ ನಿಗದಿಪಡಿಸಲಾಗಿದ್ದ ರೂ. 5 ಲಕ್ಷದ ಬದಲಾಗಿ 10 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿ ಅನುದಾನವನ್ನು ಮೀಸಲಿರಿಸಲು ತೀರ್ಮಾನಿಸಲಾಯಿತು.
2. ತಿಡಗುಂದಿ ಸರ್ಕಾರಿ ಮಹಾವಿದ್ಯಾಲಯದ ಪ್ರಾಂಶುಪಾಲರ ನಿರ್ಲಕ್ಷದಿಂದಾಗಿ ಓರ್ವ ವಿದ್ಯಾರ್ಥಿಯ ಒಂದು ವರ್ಷದ ಶೈಕ್ಷಣಿಕ ಅವಧಿ ನಷ್ಟವಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು, ಸಂಬಂಧಿಸಿದ ಪ್ರಾಂಶುಪಾಲರಿಗೆ ರೂ.10,000/-ಗಳ ದಂಡ ವಿಧಿಸಲು ತೀರ್ಮಾನಿಸಿತು.
3. ವಿಜಯಪುರ ಜಿಲ್ಲೆಯ ಕೆಲವು ಮಹಾವಿದ್ಯಾಲಯಗಳನ್ನು RCU-FESMA ಮೂಲಕ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ನಿರ್ಧರಿಸಿತು.
4. ಪರೀಕ್ಷೆಗಳನ್ನು ಪಾರದರ್ಶಕವಾಗಿ ಕೈಗೊಳ್ಳಲು ಹಾಗೂ ಪ್ರಶ್ನೆ ಪತ್ರಿಕೆಗಳ ಸೋರಿಕೆಯನ್ನು ಕಡಿಮೆ ಮಾಡಲು ಸುಧಾರಣಾ ಕ್ರಮವಾಗಿ ಬಿ.ಎಡ್ ಮತ್ತು ಸ್ನಾತಕೋತ್ತರ ವಿಭಾಗಗಳ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು Digital / Online Mode/UUCMS ಮೂಲಕ ಈ ಶೈಕ್ಷಣಿಕ(2026-27) ವರ್ಷದಿಂದ ವಿತರಿಸಲು ಸಭೆಯು ತೀರ್ಮಾನಿಸಿತು.
5. ದಿನಾಂಕ: 30.03.2017 ರ ಸಿಂಡಿಕೇಟ್ ಸಭೆಯು ಉತ್ತರ ಪತ್ರಿಕೆಗಳನ್ನು 06 ತಿಂಗಳ ಅವಧಿ ನಂತರ ವಿಲೇವಾರಿ ಮಾಡುವ ತೀರ್ಮಾನವನ್ನು ತಿದ್ದುಪಡಿಸಿ ಒಂದು ವರ್ಷದ ಅವಧಿವರೆಗೆ ಉತ್ತರ ಪತ್ರಿಕೆಗಳನ್ನು ಶೇಖರಿಸಿ, ತದನಂತರ ವಿಲೇವಾರಿ ಮಾಡುವುದು ಮತ್ತು ಮರುಮೌಲ್ಯಮಾಪನ ಉತ್ತರ ಪತ್ರಿಕೆಗಳನ್ನು 03 ವರ್ಷ ಅವಧಿವರೆಗೆ ಶೇಖರಿಸಲು ಸಭೆಯು ತೀರ್ಮಾನಿಸಿತು.
6. ವಿದ್ಯಾರ್ಥಿಗಳಿಗೆ ನಿಗದಿತ ಸಮಯಕ್ಕೆ ಪ್ರವೇಶ ಪತ್ರ(Hall Ticket)ನ್ನು ನೀಡುವಲ್ಲಿ ವಿಳಂಬ ಧೋರಣೆ ತೋರಿರುವ ಪ್ರಾಚಾರ್ಯರುಗಳಿಗೆ ನೋಟಿಸ್ ಜಾರಿ ಮಾಡಲು ಕುಲಸಚಿವರು(ಮೌಲ್ಯಮಾಪನ) ಇವರಿಗೆ ಸಭೆಯು ಸೂಚಿಸಿತು.

7. ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಸುಧಾರಣೆಗಳನ್ನು ಶಿಫಾರಸ್ಸು ಮಾಡಲು ಈಗಾಗಲೇ ಡಾ. ಮಹಾಂತೇಶ ಕಂಬಾರ ಇವರ ಅಧ್ಯಕ್ಷತೆಯಲ್ಲಿ "ಪರೀಕ್ಷಾ ಸುಧಾರಣಾ ಸಮಿತಿ" ಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಕಾರ್ಯಗಳ ಸುಧಾರಣೆಗೆ ಸಲಹೆ/ಶಿಫಾರಸ್ಸುಗಳನ್ನು ನೀಡಬೇಕೆಂದು ಸಭೆಯು ಸೂಚಿಸಿತು.
8. ಬೇಡಿಕೆಗೆ ಅನುಗುಣವಾಗಿ Foreign Language Course ಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಯಿತು.

**ಕುಲಸಚಿವರು(ಆಡಳಿತ)**

ವಿಜಯಪುರ ಜಿಲ್ಲೆಯಲ್ಲಿರುವ ವಿವಿಧ ಮಹಾವಿದ್ಯಾಲಯಗಳನ್ನು ಬಾಗಲಕೋಟ ವಿಶ್ವವಿದ್ಯಾಲಯಕ್ಕೆ ಸೇರಿಸಲು ಹಲವಾರು ಹೋರಾಟಗಳು ನಡೆಯುತ್ತಿರುವ ಮಾಹಿತಿಯನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದು ಸಿಂಡಿಕೇಟ್ ಅಭಿಪ್ರಾಯ ಕೋರಿದರು. ಈಗಾಗಲೇ ಸ್ನಾತಕೋತ್ತರ ಕೇಂದ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ವಿಜಯಪುರ ಜಿಲ್ಲೆಯ ಅಭಿವೃದ್ಧಿ ಕುರಿತಾಗಿ ಸಮಿತಿ ರಚಿಸಲಾಗಿದ್ದು, ವರದಿಯನ್ನು ಆಧಾರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಕಾರಣ, ವಿಜಯಪುರ ಜಿಲ್ಲೆಯಲ್ಲಿರುವ ಮಹಾವಿದ್ಯಾಲಯಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿಯೇ ಉಳಿಸಿಕೊಳ್ಳಲು ವಿಶ್ವವಿದ್ಯಾಲಯವು ಪ್ರಯತ್ನ ವಹಿಸಲು ಸಭೆಯು ಸೂಚಿಸಿತು.

ತದನಂತರ ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2026/05/01 | ದಿನಾಂಕ: 06.04.2026 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.<br><br>ಅನುಪಾಲನಾ ವರದಿ 01: ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ B.Ed Intergrated Course ಪ್ರಾರಂಭಿಸಲು ಡಾ. ಸುಷ್ಮಾ ಆರ್. ಇವರನ್ನು ಒಳಗೊಂಡು ಏಕ ಸದಸ್ಯರ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಸದರಿ ಸಮಿತಿ ಸಲ್ಲಿಸಿದ ವರದಿಯನ್ವಯ ಕ್ರಮವಹಿಸಲು ಸೂಚಿಸಿತು ಎಂದು ನಮೂದಾಗಿದ್ದು, ಸದರಿ ಸಮಿತಿಯು ವರದಿ ಸಲ್ಲಿಸಿದ ನಂತರ ಕ್ರಮವಹಿಸುವುದು ಎಂದು ತಿದ್ದುಪಡಿಗೊಳಿಸಲಾಯಿತು.<br><br>ಅನುಪಾಲನಾ ವರದಿ 02: ವಿಜಯಪುರದ ಜಿಲ್ಲೆಯ ಶ್ರೀಮತಿ ಮೀನಾಕ್ಷಿ ಆರ್ ಕಲ್ಲೂರ ಬಿ.ಎಡಿ ಮಹಾವಿದ್ಯಾಲಯ ಹಾಗೂ ಶ್ರೀ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ User ID ಮತ್ತು Photo ಮೂಲಕ Face Bio Metric ಕಡ್ಡಾಯಗೊಳಿಸಲಾಗಿದ್ದರೂ ಸರಿಯಾಗಿ ಹಾಜರಾತಿ ನಿರ್ವಹಣೆ ಆಗುತ್ತಿಲ್ಲವೆಂದು ಸದಸ್ಯರಾದ ಡಾ. ಸುಷ್ಮಾ ಆರ್ ಇವರು ಸಲಹೆ ನೀಡಿದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ IT Cell ಮೂಲಕ ಅತ್ಯುನ್ನತ ಐರಿಷ್ ಮಾದರಿಯ ಮಷಿನನ್ನು ಸದರಿ ಮಹಾವಿದ್ಯಾಲಯಗಳಲ್ಲಿ ಅಳವಡಿಸಲು ಸಭೆಯು ತೀರ್ಮಾನಿಸಿತು ಹಾಗೂ ಮುಂದಿನ ಸಭೆಯಲ್ಲಿ ಮಹಾವಿದ್ಯಾಲಯಗಳ ಪ್ರಗತಿ ಕುರಿತಂತೆ ಮಾಹಿತಿಯನ್ನು ನೀಡಲು ಸೂಚಿಸಿತು. |

| | | |
|---|---|---|
| | | ಅನುಪಾಲನಾ ವರದಿ 05: Repair work to compound wall and road work of Dr. F. G. Halakatti P.G. Centre, Vijaypura ಕಾಮಗಾರಿಯ ಅವಧಿ ವಿಸ್ತರಣೆ ಮಾಡಿದ್ದರ ಕುರಿತು ಸಭೆಯು ಘಟನೋತ್ತರ ಅನುಮೋದನೆ ನೀಡಿರುತ್ತದೆ. ಸದಸ್ಯರಾದ ಶ್ರೀ ರಫೀ ಭಂಡಾರಿ ಇವರು ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ನಾಮಫಲಕ ಕೂಡ ಅಳವಡಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ, ಸಭೆಯು ಅನುಮೋದನೆ ನೀಡಿತು.<br><br>ಅನುಪಾಲನಾ ವರದಿ 10:<br>Construction of Compund Wall For Rani Channamma University at Hirebagewadi New Campus, Belagavi ಕಾಮಗಾರಿಯು ಕಳಪೆ ಗುಣಮಟ್ಟದ್ದಾಗಿರುವುದರಿಂದ EIRL ಹಾಗೂ Workslip ನಂತೆ ಬಿಲ್ ಪಾವತಿಸಲು ಡಾ. ಮಹಾಂತೇಶ ಕಂಬಾರ ಇವರು ಆಕ್ಷೇಪಿಸಿದ ಕಾರಣ, ಬಿಲ್ಲನ್ನು ಸಂದಾಯ ಮಾಡುವ ವಿಷಯವನ್ನು ತಡೆಹಿಡಿಯಲಾಗಿತ್ತು. ಮುಂದುವರೆದು, ಡಾ. ಮಹಾಂತೇಶ ಕಂಬಾರ ಇವರು ತಮ್ಮ ಆಕ್ಷೇಪಣೆ ಹಿಂತೆಗೆದುಕೊಂಡು ಲಿಖಿತ ವರದಿ ನೀಡುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ, ಕಾಮಗಾರಿಗೆ ಸಂಬಂಧಿಸಿ EIRL ಹಾಗೂ Workslssip ನಂತೆ ಬಿಲ್ ಪಾವತಿಸಲು ಮತ್ತು ದಂಡ ರಹಿತವಾಗಿ EOT ನೀಡಲು ಸಭೆಯು ತೀರ್ಮಾನಿಸಿತು.<br><br>ತದನಂತರ ಅನುಪಾಲನಾ ವರದಿ ಪರಿಷ್ಕರಿಸಿ ಸಭೆಯು ದೃಢೀಕರಿಸಿತು. |
| 02 | 2026/05/02 | ಶ್ರೀ ಮಾರುತಿ ಮಾಯಪ್ಪ ಕರಿಯವರ, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ ಅರೆಕಾಲಿಕವಾಗಿ ಪಿಎಚ್.ಡಿ. ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ 2025-26ನೇ ಸಾಲಿಗೆ ರಾಜ್ಯಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪ್ರವೇಶಾತಿಗಾಗಿ ಅಧಿಸೂಚನೆ ಹೊರಡಿಸಿದ್ದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ವಿದ್ಯಾಮಂಡಳ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಾರುತಿ ಮಾಯಪ್ಪ ಕರಿಯವರ ಇವರಿಗೆ ರಾಜ್ಯಶಾಸ್ತ್ರ ವಿಷಯದಲ್ಲಿ ಅರೆಕಾಲಿಕವಾಗಿ ಪಿಎಚ್.ಡಿ. ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ(NOC) ನೀಡಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 03 | 2026/05/03 | ಪ್ರೊ. ಡಿ. ಎನ್. ಪಾಟೀಲ್, ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರು ವಯೋನಿವೃತ್ತಿ ಹೊಂದುತ್ತಿರುವುದರಿಂದ ಸದರಿಯವರಿಗೆ ವಯೋನಿವೃತ್ತಿ ನೋಟಿಸ್ ಜಾರಿಗೊಳಿಸಲು ಹಾಗೂ ವಯೋನಿವೃತ್ತಿ ಸೌಲಭ್ಯಗಳನ್ನು ಮಂಜೂರಿಸುವ ಕುರಿತು. |
| | **ತೀರ್ಮಾನ** | **ಪ್ರೊ. ಡಿ. ಎನ್. ಪಾಟೀಲ್, ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರ ಸೇವಾ ಸೇವಾ ಪುಸ್ತಕವನ್ನು ಪರಿಶೀಲಿಸಲಾಗಿದ್ದು, ಸೇವಾ ಪುಸ್ತಕದಲ್ಲಿ ಜನ್ಮ ದಿನಾಂಕ: 15-06-1965 ಎಂದು ನಮೂದಿಸಲಾಗಿರುತ್ತದೆ. ಕಾರಣ, ದಿನಾಂಕ: 31.05.2027 ರಂದು 62 ವರ್ಷ ಪೂರ್ಣಗೊಳ್ಳುವುದರಿಂದ, ಕರ್ನಾಟಕ ನಾಗರಿಕ ಸೇವಾ ನಿಯಮ-95 ಮತ್ತು ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯು.ಎನ್.ಇ 2009(ಪಿ), ಬೆಂಗಳೂರು, ದಿನಾಂಕ: 15.10.2009 ರನ್ವಯ ಸದರಿಯವರು ದಿನಾಂಕ: 31.05.2027 ರಂದು ವಯೋನಿವೃತ್ತಿಗೊಳ್ಳುತ್ತಾರೆ. ಕಾರಣ ವಯೋನಿವೃತ್ತಿ ನೋಟಿಸ್ ಜಾರಿಗೊಳಿಸಲು ಮತ್ತು ವಯೋನಿವೃತ್ತಿ ಸೌಲಭ್ಯಗಳನ್ನು ಮಂಜೂರಿಸುವ ಪ್ರಕ್ರಿಯೆ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |

<table>
<tr><td>04</td><td>2026/05/04</td><td>ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗಕ್ಕೆ ತಾತ್ಕಾಲಿಕವಾಗಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಕುರಿತು.</td></tr>
<tr><td></td><td>ತೀರ್ಮಾನ</td><td>ಡಾ. ಮಹಾಂತೇಶ ಎಂ. ಕುರಿ ಇವರನ್ನು ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗಕ್ಕೆ ದಿನಾಂಕ: 23.04.2026 ರಿಂದ ಅನ್ವಯವಾಗುವಂತೆ ತಾತ್ಕಾಲಿಕವಾಗಿ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿರುತ್ತದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>05</td><td>2026/05/05</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದ್ದಕ್ಕೆ ಸಿಂಡಿಕೇಟ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಮತ್ತು ಸೇವಾ ಪ್ರಮಾಣ ಪತ್ರ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕೋರಲಾಯಿತು.
<table>
<tr><th>Sl No</th><th>Name of the Teaching Staff</th><th>Details of permission to apply</th><th>Post applied</th></tr>
<tr><td>1</td><td>Prof. V. F. Nagannawar<br>Senior Professor<br>Department of English.</td><td>Indira Gandhi National Tribal University (IGNTU) Amarkantaka, Madhyapradesh</td><td>Vice-Chancellor</td></tr>
<tr><td>2</td><td>Prof. Basavaraj Padmashali<br>Senior Professor<br>Department of Chemistry.</td><td>Karnataka State Open University, Mysuru.</td><td>Vice-Chancellor</td></tr>
<tr><td>3</td><td>Dr. Fayaz Ahmed H Ilkal<br>Assistant Professor<br>Department of English.</td><td>Central University of Rajasthan</td><td>Professor</td></tr>
</table>
ಪಟ್ಟಿ 01 ಮತ್ತು 2 ರಲ್ಲಿ ತಿಳಿಸಿದ ಸಿಬ್ಬಂದಿಗಳಿಗೆ ಸಭೆಯು ಅನುಸಮರ್ಥನೆ ನೀಡಿತು. ಆದರೆ, ಪಟ್ಟಿ 03 ರಲ್ಲಿ ಕಾಣಿಸಿದ ಸಿಬ್ಬಂದಿಯ ವಿರುದ್ಧ ಚೆಕ್ ಬೌನ್ಸ್ ಪ್ರಕರಣ ದಾಖಲಾಗಿದ್ದು ಬಂಧನಕ್ಕೆ ಒಳಪಟ್ಟಿರುವುದು ಕಂಡು ಬಂದಿರುವುದರಿಂದ ಸದರಿಯವರಿಗೆ Central University of Rajasthan ಇಲ್ಲಿ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಲು ನೀಡಲಾದ ನಿರಾಕ್ಷೇಪಣಾ ಮತ್ತು ಸೇವಾ ಪ್ರಮಾಣ ಪತ್ರವನ್ನು ರದ್ದುಪಡಿಸಲು ಸಭೆಯು ತೀರ್ಮಾನಿಸಿತು.</td></tr>
<tr><td>06</td><td>2026/05/06</td><td>ಬೋಧಕೇತರ ಸಿಬ್ಬಂದಿಗೆ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ವಿನಂತಿಸಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಸಂತೋಷ ಬಿ., ಇವರು ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ ಇಲ್ಲಿ ಖಾಲಿ ಇರುವ ಸಹಾಯಕ ಕುಲಸಚಿವ ಹುದ್ದೆಗೆ ಅಂತರ ವಿಶ್ವವಿದ್ಯಾಲಯ ಅಡಿಯಲ್ಲಿ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ವಿನಂತಿಸಿಕೊಂಡಿರುವ ವಿಷಯವನ್ನು ಸಭೆಯು ಮುಂದೂಡಿತು.</td></tr>
<tr><td>07</td><td>2026/05/07</td><td>ಶ್ರೀ ಕೇದಾರಲಿಂಗ ಕಾಮಕರ, ಗಣಕಯಂತ್ರ ನಿರ್ವಾಹಕರು ಇವರಿಗೆ ಮಾನ್ಯ ಕುಲಪತಿಗಳ ಸ್ವಂತ ಪರ್ಯಾಲೋಚನದ ಸಾದಿಲ್‌ವಾರು ಲೆಕ್ಕ ಶಿರ್ಷಿಕೆಯಲ್ಲಿ ಸಿಂಡಿಕೇಟ್ ಸಭೆ ಅನುಸಮರ್ಥನೆ ಕಾಯ್ದಿರಿಸಿ ರೂ. 2,03,000/-ಗಳ ವೈದ್ಯಕೀಯ ವೆಚ್ಚ ಮರು ಸಂದಾಯ ಮಾಡಿದ ಕುರಿತು.</td></tr>
</table>

<table>
<tr><td></td><td>ತೀರ್ಮಾನ</td><td>ಶ್ರೀ ಕೇದಾರಲಿಂಗ ಕಾಮಕರ, ಗಣಕಯಂತ್ರ ನಿರ್ವಾಹಕರು ಇವರು ಸಲ್ಲಿಸಿದ ರೂ. 5,94,854/-ಗಳ ಶಸ್ತ್ರಚಿಕಿತ್ಸೆಯ ವೈದ್ಯಕೀಯ ವೆಚ್ಚದ ಬಿಲ್ಲುಗಳಿಗೆ ಸಂಬಂಧಿಸಿದಂತೆ, CGHS ದರಗಳ ಮಾನದಂಡಗಳನ್ವಯ ರೂ. 3,91,342/-ಗಳ ಮೊತ್ತವನ್ನು ಈಗಾಗಲೇ ಪಾವತಿಸಲಾಗಿತ್ತು. ಆದರೆ ಸದರಿ ನೌಕರನು ಸುಮಾರು 8 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಭರಿಸಿರುವುದಾಗಿ ಕೋರಿದ ಹಿನ್ನೆಲೆಯಲ್ಲಿ, ನೌಕರನ ಶಸ್ತ್ರ ಚಿಕಿತ್ಸೆ, ಮಾನಸಿಕ ಮತ್ತು ದೇಹ ಸಂಬಂಧಿ ಕಾಯಿಲೆಯ ಮಾಹಿತಿಯನ್ನು ಮತ್ತೆ ಪರಿಶೀಲಿಸಿ ವಿಶೇಷ ಸಂದರ್ಭವೆಂದು ಪರಿಗಣಿಸಿ ಮಾನವೀಯತೆಯ ದೃಷ್ಠಿಯಿಂದ ಮಾನ್ಯ ಕುಲಪತಿಗಳ ಸ್ವಂತ ಪರ್ಯಾಲೋಚನದ ಸಾದಿಲ್‌ವಾರ ಲೆಕ್ಕಶೀರ್ಷಿಕೆ ಸಂಖ್ಯೆ 1200/1206 ರಿಂದ ರೂ. 2,03,000/-ಗಳ ಮೊತ್ತವನ್ನು ಮತ್ತೆ ಭರಿಸಿ ಶ್ರೀ ಕೇದಾರಲಿಂಗ ಕಾಮಕರ ಇವರಿಗೆ (ಒಟ್ಟು ರೂ. 3,91,342+ ರೂ. 2,03,000= 5,94,342/-) ಪಾವತಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.<br><br>ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಠಿಯಿಂದ "ಆರೋಗ್ಯ ವಿಮೆ" ಯೋಜನೆಯನ್ನು ಜಾರಿ ಮಾಡಲು ಸಲಹೆ ನೀಡಿದ ಹಿನ್ನೆಲೆಯಲ್ಲಿ, ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು ಹಾಗೂ ಸದರಿ ಸಮಿತಿಯು "ಆರೋಗ್ಯ ವಿಮೆ" ಜಾರಿ ಕುರಿತು ವರದಿ ಸಲ್ಲಿಸಲು ಸೂಚಿಸಿತು.
<table>
<tr><th>ಸಂ</th><th>ಹೆಸರು</th><th>ಪದನಾಮ</th></tr>
<tr><td>01</td><td>ಪ್ರೊ. ವ್ಹಿ. ಎಸ್. ಶಿಗೇಹಳ್ಳಿ,<br>ಹಿರಿಯ ಪ್ರಾಧ್ಯಾಪಕರು ಮತ್ತು ಸಿಂಡಿಕೇಟ್ ಸದಸ್ಯರು<br>ಗಣಿತಶಾಸ್ತ್ರ ವಿಭಾಗ, ರಾಚವಿ, ಬೆಳಗಾವಿ</td><td>ಅಧ್ಯಕ್ಷರು</td></tr>
<tr><td>02</td><td>ಶ್ರೀ ನೀಲಪ್ಪ ಹೊಸಮನಿ<br>ಸಿಂಡಿಕೇಟ್ ಸದಸ್ಯರು, ರಾಚವಿ, ಬೆಳಗಾವಿ</td><td>ಸದಸ್ಯರು</td></tr>
<tr><td>03</td><td>ಡಾ. ಡಿ. ಕೆ. ಕಾಂಬಳೆ, ಉಪಕುಲಸಚಿವರು</td><td>ಸದಸ್ಯರು</td></tr>
<tr><td>04</td><td>ಡಾ. ಅಪ್ಪಾಸಾಬ ಕೋಣಿ, ವೈದ್ಯಾಧಿಕಾರಿಗಳು</td><td>ಸದಸ್ಯರು</td></tr>
<tr><td>05</td><td>ಡಾ. ಯೋಗಿತಾ ಪೋತದಾರ, ವೈದ್ಯಾಧಿಕಾರಿಗಳು</td><td>ಸದಸ್ಯ ಕಾರ್ಯದರ್ಶಿಗಳು</td></tr>
</table></td></tr>
<tr><td>08</td><td>2026/05/08</td><td>ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಯುಜಿಸಿ ನಿಯಮಾವಳಿಗಳ ಅನ್ವಯ CAS ಯೋಜನೆ ಅಡಿಯಲ್ಲಿ ಪದೋನ್ನತಿ ನೀಡುವುದಕ್ಕೆ ಸಂಬಂಧಿಸಿದಂತೆ ಚರ್ಚಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಸಿಎಎಸ್ ಯೋಜನೆ ಅಡಿಯಲ್ಲಿ ಪದೋನ್ನತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಗೌರವಾನ್ವಿತ ರಾಜ್ಯಪಾಲರ ನಾಮನಿರ್ದೇಶಿತರನ್ನು ಒಳಗೊಂಡು ವಿವಿಧ ವಿಭಾಗಗಳ ಸಿಎಎಸ್ ಪದೋನ್ನತಿ ಸಭೆಯನ್ನು ವಿವಿಧ ದಿನಾಂಕಗಳಂದು ನಿಗದಿಪಡಿಸಲಾಗಿತ್ತು. ಅದರಲ್ಲಿ ಕೆಲ ವಿಭಾಗಗಳ ಸಮಿತಿ ಸಭೆಯು ದಿನಾಂಕ: 09.04.2026 ಮತ್ತು 10.04.2026 ರಂದು ಜರುಗಿರುತ್ತದೆ. ಸದರಿ ದಿನಾಂಕಗಳಂದು ಜರುಗಿದ ಸಮಿತಿ ಸಭೆಯ ನಡಾವಳಿಯನ್ನು ಮುಚ್ಚಿದ ಲಕೋಟೆಯಲ್ಲಿ ನೀಡಿರುತ್ತಾರೆ. ತದನಂತರ, ಗೌರವಾನ್ವಿತ ರಾಜ್ಯಪಾಲರ ನಾಮನಿರ್ದೇಶಿತರು ವಿದೇಶಿ ಪ್ರವಾಸ ಕೈಗೊಂಡಿದ್ದರಿಂದ ಭಾಗಶ: ಪದೋನ್ನತಿ ಪ್ರಕ್ರಿಯೆ ಪೂರ್ಣಗೊಂಡು ಇನ್ನುಳಿದ ವಿಭಾಗಗಳ ಪದೋನ್ನತಿ ಪ್ರಕ್ರಿಯೆ ಪೂರ್ಣಗೊಂಡಿರುವುದಿಲ್ಲ. ಈ ವಿಷಯದ ಕಡತ ಮಂಡಿಸಿದ್ದು, ಜೇಷ್ಠತೆಯಲ್ಲಿ ಹಿರಿತನವನ್ನು ಕಾಯ್ದುಕೊಂಡು ಸ್ವಾಭಾವಿಕ ನ್ಯಾಯದ</td></tr>
</table>

| | | |
|---|---|---|
| | | ಅಂಶವನ್ನು ಪಾಲಿಸಬೇಕಾದ ಅವಶ್ಯಕತೆ ಇರುವುದಾಗಿ ಮಾನ್ಯ ಕುಲಪತಿಗಳು ಕಡತದಲ್ಲಿ ಷರಾ ನಮೂದಿಸಿರುತ್ತಾರೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು, ಮಾನ್ಯ ಕುಲಪತಿಗಳ ಷರಾದಂತೆ ಕ್ರಮವಹಿಸಲು ತೀರ್ಮಾನಿಸಿತು ಹಾಗೂ ಸಿಎಎಸ್ ಪದೋನ್ನತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿತು. |
| 09 | 2026/05/09 | ಡಾ. ಫಯಾಜ ಅಹ್ಮದ್ ಎಚ್ ಇಳಕಲ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು. |
| | ತೀರ್ಮಾನ | **ಡಾ. ಫಯಾಜ ಅಹ್ಮದ್ ಎಚ್ ಇಳಕಲ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರ ವಿರುದ್ಧ ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ ಇಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ: 91/2023, ರ ಆದೇಶದಲ್ಲಿ ಸದರಿಯವರು ದೋಷಿ ಎಂದು ತೀರ್ಮಾನಿಸಿ, ಮುಧೋಳ ಪೋಲೀಸ್ ಠಾಣೆ ಇಲ್ಲಿ ಬಂಧನಕ್ಕೆ ಒಳಗಾಗಿರುವ ವಿಷಯವು ಅಂತರ್ಜಾಲದಿಂದ ಪಡೆದ ಮಾಹಿತಿಯನ್ನು ಸಭೆಗೆ ನೀಡಲಾಯಿತು.**<br>**ಸದರಿಯವರ ಈ ವರ್ತನೆಯು ಕರ್ನಾಟಕ ರಾಜ್ಯ ನಾಗರೀಕ ಸೇವಾ(ನಡತೆ) ನಿಯಮ-2021 ರ ನಿಯಮ-03 ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957 ರ ನಿಯಮ-10 ರ (1(2)) ಹಾಗೂ ನಿಯಮ 11 ರನ್ವಯ ಡಾ. ಫಯಾಜ ಅಹ್ಮದ್ ಎಚ್ ಇಳಕಲ್, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಭೆಯು ತೀರ್ಮಾನಿಸಿತು.** |
| 10 | 2026/05/10 | ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕರ್ತವ್ಯ(KAAMS) app ಮತ್ತು ವಿದ್ಯಾರ್ಥಿಗಳು ನಿರಂತರ App ಗಳನ್ನು ಅನುಷ್ಠಾನಗೊಳಿಸುವ ಕುರಿತು. |
| | ತೀರ್ಮಾನ | **ಕರ್ನಾಟಕ ಸರ್ಕಾರವು ಆರ್ಟೀಫಿಶಿಯಲ್ ಇಂಟೆಲಿಜೆನ್ಸ್(AI) ತಂತ್ರಜ್ಞಾನಗಳನ್ನು ಬಳಸಿಕೊಂಡು ಎಲ್ಲಾ ಇಲಾಖೆಗಳಲ್ಲಿ ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ(KAAMS) ನ್ನು ಪರಿಚಯಿಸಲಾಗುವುದು" ಎಂದು ಘೋಷಿಸಿರುತ್ತಾರೆ. ಈ ಘೋಷಣೆ ಅನ್ವಯ ಪ್ರಸ್ತುತ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಹಾಜರಾತಿ ನಿರ್ವಹಣೆಯನ್ನು ಸರಳಗೊಳಿಸುವುದಕ್ಕಾಗಿ ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯ "ಕರ್ತವ್ಯ(KAAMS) App " ನ್ನು ವಿಶ್ವವಿದ್ಯಾಲಯದ ನೌಕರರಿಗೆ ಅನುಷ್ಠಾನಗೊಳಿಸುವುದು ಅವಶ್ಯಕ ಇರುತ್ತದೆ. ಇದರ ಜೊತೆಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಜರಾತಿಯನ್ನು ಸಹ ಪಾರದರ್ಶಕವಾಗಿ ಜರುಗಿಸುವುದಕ್ಕಾಗಿ "ನಿರಂತರ App" ನ್ನು ಸಹ ಪರಿಚಯಿಸಿರುತ್ತಾರೆ**<br>**ಆದ್ದರಿಂದ ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯ "ಕರ್ತವ್ಯ(KAAMS) App" ನ್ನು ಮತ್ತು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ(Full time) "ನಿರಂತರ App" ನ್ನು ಅನುಷ್ಠಾನಗೊಳಿಸಲು ಸಭೆಯು ತೀರ್ಮಾನಿಸಿತು.** |

| | | |
|---|---|---|
| 11 | 2026/05/11 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಲಾಗಿರುವ E-Vidya ಸೇವೆಯನ್ನು ಮೂರು ವರ್ಷಗಳಿಗೆ ಮುಂದುವರೆಸುವ ಕುರಿತು. |
| | **ತೀರ್ಮಾನ** | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25 ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾದ E-Vidya App ನ ಸೇವೆಯು ಮೂರು ವರ್ಷಗಳ ಅವಧಿ ಪೂರ್ಣಗೊಂಡಿರುತ್ತದೆ. ಸದರಿ App ನಲ್ಲಿ ಅಂದಾಜು 4,35,830- ವೀಕ್ಷಣೆಗಳಾಗಿದ್ದು, ಅದರಲ್ಲಿ 7000-ವಿಡಿಯೋಗಳು ಅಪಲೋಡ್ ಆಗಿವೆ. 1,15,922-ಪ್ರಶ್ನೆ ಪತ್ರಿಕೆ ಮತ್ತು 1,07,654- ನೋಟ್ಸ್ ಡೌನಲೋಡ್ ಹಾಗೂ ಇನ್ನಿತರ ಸೇವೆಗಳ ಉಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಂಡಿರುತ್ತಾರೆ. ಕಾರಣ, ಸದರಿ ಸೇವೆಯನ್ನು ಮುಂದುವರೆಸುವ ಕುರಿತು ಸಭೆಯ ಮಾರ್ಗದರ್ಶನ ಕೋರಿದ ಹಿನ್ನೆಲೆಯಲ್ಲಿ, E-Vidya ಸೇವೆಯನ್ನು ಮುಂದುವರೆಸಲು ಸಭೆಯು ತೀರ್ಮಾನಿಸಿತು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ App ನಲ್ಲಿ ಹೆಚ್ಚುವರಿಯಾಗಿ Web Development, Software Testing, Data Analysis, IT Support Job, ಕೆನರಾ ಬ್ಯಾಂಕ್ ವತಿಯಿಂದ ನೀಡಲಾಗುವ ತರಬೇತಿ(ಟೆಲರಿಂಗ್, ಪೇಟಿಂಗ ಇನ್ನಿತರೇ ಕೋರ್ಸಗಳು) AI in Business, Digital Marketing, Sales and Growth Ranking, E-Commerce and Online Business, Start up Entrepreneurship ಹಾಗೂ ಇನ್ನೀತರ ಕೌಶಲ್ಯ ಅಭಿವೃದ್ಧಿ/ಉದ್ಯೋಗಾಧಾರಿತ ಕೋರ್ಸಗಳನ್ನು ಸೇರಿಸುವ ಷರತ್ತಿಗೆ ಒಳಪಡಿಸುವುದು ಮತ್ತು ನಿರ್ದೇಶಕರು/ಸಂಯೋಜಕರನ್ನು ನೇಮಕ ಮಾಡಿ "ಡಿಜಿಟಲ್ ಸರ್ಟೀಫಿಕೇಟ"ನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಸಭೆಯು ಸೂಚಿಸಿತು. |
| 12 | 2026/05/12 | ವಿಶ್ವವಿದ್ಯಾಲಯದ ಪ್ರಸ್ತುತ ಆವರಣವನ್ನು ಉಳಿಸಿಕೊಳ್ಳುವ (Retaining of Present Campus) ಮತ್ತು ವಿಭಾಗಗಳ ಕಾರ್ಯಸ್ಥಳಗಳನ್ನು ಶಾಶ್ವತವಾಗಿ ನಿರ್ಧರಿಸುವ ಕುರಿತು. |
| | **ತೀರ್ಮಾನ** | ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, ಕುಲಸಚಿವರು(ಆಡಳಿತ) ಹಾಗೂ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳ ಉಪಸ್ಥಿತಿಯಲ್ಲಿ ದಿನಾಂಕ: 15.04.2026 ರಂದು ಜರುಗಿದ ಸಭೆಯ ನಡಾವಳಿಯನ್ನು ಸಭೆಗೆ ಮಂಡಿಸಲಾಯಿತು. ಮುಖ್ಯ ಆವರಣ, ವಿದ್ಯಾಸಂಗಮದಲ್ಲಿ ಕಲಾ, ವಾಣಿಜ್ಯ ಮತ್ತು ಶಿಕ್ಷಣ ನಿಖಾಯದ ವಿಭಾಗಗಳನ್ನು, ಹಿರೇಬಾಗೇವಾಡಿಯ ವಿಜ್ಞಾನ ಸಂಗಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯದ ವಿಭಾಗಗಳನ್ನು ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಭಾಷಾ ವಿಷಯಗಳ ವಿಭಾಗಗಳ ಕಾರ್ಯ ಸ್ಥಳಗಳ ಕುರಿತು ಸಭೆಗೆ ಮಾಹಿತಿ ನೀಡಲಾಯಿತು.<br>ಮುಂದುವರೆದು, ಮುಖ್ಯ ಆವರಣ, ವಿದ್ಯಾಸಂಗಮದಲ್ಲಿ ಈಗಾಗಲೇ ಕೋಟ್ಯಾಂತರ ರೂಪಾಯಿ ವೆಚ್ಚ ಭರಿಸಿ ಕಟ್ಟಡಗಳನ್ನು ನಿರ್ಮಿಸಲಾಗಿದ್ದು ಸದರಿ ಕಟ್ಟಡಗಳ ಸದುಪಯೋಗ ಪಡೆದುಕೊಳ್ಳಲು, ಭೂತರಾಮನಹಟ್ಟಿಯ ಪ್ರಸ್ತುತ ಜಮೀನನ್ನು ವಿಶ್ವವಿದ್ಯಾಲಯದ ಸ್ವಾಯತ್ತದಲ್ಲಿ ಪಡೆದುಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಹಾಗೂ ವಿಶಾಲವಾದ ಅಧ್ಯಯನ ಕೊಠಡಿ ಅಥವಾ ತರಗತಿ ಕೊಠಡಿಯು ವಿದ್ಯಾರ್ಥಿಗಳಿಗೆ ಮುಕ್ತವಾಗಿ ಕುಳಿತುಕೊಳ್ಳಲು ಹಾಗೂ ಕಲಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ನೀಡುವ ದೃಷ್ಟಿಯಿಂದ ವಿವಿಧ ವಿಭಾಗಗಳ ಕಾರ್ಯಸ್ಥಳಗಳನ್ನು ವಿಂಗಡಿಸಲಾಗಿರುವ ಹಿನ್ನೆಲೆಯಲ್ಲಿ, ದಿನಾಂಕ: 15.04.2026 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡಾವಳಿಯಂತೆ ಕ್ರಮವಹಿಸಲು ಸಭೆಯು ತೀರ್ಮಾನಿಸಿತು. |
| 13 | 2026/05/13 | ಹಿರೇಬಾಗೇವಾಡಿ ಗ್ರಾಮ ತಾಲೂಕು ಮತ್ತು ಜಿಲ್ಲೆ ಬೆಳಗಾವಿ ಸರ್ವೆ ನಂಬರ 193/1 ರಲ್ಲಿ ಕ್ಷೇತ್ರ:4 ಎಕರೆ ಗುಂಟೆಯಲ್ಲಿ 24 ಗುಂಟೆ ಆಸ್ತಿಯನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವ ಕುರಿತು. |

| | | |
|---|---|---|
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣಕ್ಕೆ ಹೋಗುವ ದಾರಿಗೆ ಅವಶ್ಯವಾದ 24 ಗುಂಟೆ ಜಮೀನು ಅತೀ ಅವಶ್ಯಕತೆ ಇರುವುದರಿಂದ ಜಮೀನಿನ ಮಾಲೀಕರಿಂದ General Power of attorney ಇದನ್ನು ಘನತೆವೆತ್ತ ರಾಜ್ಯಪಾಲರ/ವಿಶ್ವವಿದ್ಯಾಲಯದ ಹೆಸರಿಗೆ ಉಪನೋಂಧಣಾಧಿಕಾರಿಗಳ ಕಛೇರಿ, ಬೆಳಗಾವಿಯಲ್ಲಿ ತಾತ್ಕಾಲಿಕವಾಗಿ ಪಡೆದುಕೊಂಡಿದ್ದು ಇರುತ್ತದೆ ಹಾಗೂ ಸದರಿ ನೂತನ ಆವರಣದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಅಂದಾಜು ರೂ. 10 ಕೋಟಿಗಳ ವೆಚ್ಚದ ರಸ್ತೆ ಕಾಮಗಾರಿ ಚಾಲ್ತಿಯಲ್ಲಿರುತ್ತದೆ. ಆದರೆ, ಜಮೀನಿನ ಮಾಲೀಕರು ಉಡುಗೊರೆಯಾಗಿ ನೀಡಿದ 24 ಗುಂಟೆ ಜಾಗಕ್ಕೆ ಪೋಡಿ ಮತ್ತು 11-ಇ ನಕ್ಷೆ ಇಲ್ಲದಿರುವುದರಿಂದ, ಸದರಿ ಪೋಡಿ/11-ಇ ಪ್ರಕ್ರಿಯೆ ಮುಗಿದ ನಂತರ ವಿಶ್ವವಿದ್ಯಾಲಯಕ್ಕೆ ಮಾನ್ಯ ಗೌರವಾನ್ವಿತ ರಾಜ್ಯಪಾಲರ ಹೆಸರಿನಲ್ಲಿ ಉಚಿತ ಕೊಡುಗೆ ನೀಡಲು ಒಪ್ಪಿದ್ದು/General Power of attorney ಆಗಿದ್ದು, GPA No: BES-4-00063-2026-27 ನ ದಸ್ತಾವೇಜು ಮತ್ತು ಷರತ್ತುಗಳನ್ನು ವಿಶ್ವವಿದ್ಯಾಲಯದ ರಸ್ತೆ ಸಮಸ್ಯೆ ಪರಿಹರಿಸುವ ಮಾರ್ಗವಾಗಿ ಎಲ್ಲ ಷರತ್ತುಗಳನ್ನು ಪರಿಶೀಲಿಸಿ, ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 14 | 2026/05/14 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮರುನಾಮಕರಣ ಮಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಸಚಿವ ಸಂಪುಟದಲ್ಲಿ ಘೋಷಣೆಯಾಗಿರುತ್ತದೆ. ಆದರೆ, ಹೆಸರಿನಲ್ಲಿ ಸಣ್ಣ ಅಕ್ಷರ ದೋಷ ಇರುವುದರಿಂದ ಸರಿಮಾಡುವ ಪ್ರಕ್ರಿಯೆ ಸರ್ಕಾರದ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಕಾರಣ, ಸರ್ಕಾರದಿಂದ ಅನುಮೋದನೆಗೊಂಡ ನಂತರ ಮರುನಾಮಕರಣ ಮಾಡುವುದೋ ಅಥವಾ ಸರ್ಕಾರದ ಅನುಮೋದನೆ ಕಾಯ್ದಿರಿಸಿ "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂಬ ಹೆಸರನ್ನು ಪ್ರಸ್ತುತ ಆಡಳಿತ ವ್ಯವಹಾರಗಳಲ್ಲಿ ಉಪಯೋಗಿಸುವ ಕುರಿತು ಸಭೆಯ ಮಾರ್ಗದರ್ಶನ ಕೋರಲಾಯಿತು.**<br>**ಹೆಸರಿನಲ್ಲಿ ಸಣ್ಣ ಅಕ್ಷರ ದೋಷ ಇರುತ್ತದೆ ಹಾಗೂ ಸರ್ಕಾರದಿಂದ ಅನುಮೋದನೆಗೊಳ್ಳುವ ಪ್ರಕ್ರಿಯೆ ವಿಳಂಬವಾಗುವ ಸಂಭವವಿರುತ್ತದೆ. ಮುಖ್ಯವಾಗಿ ಪ್ರಸ್ತುತ ನೂತನ ಕಟ್ಟಡ ನಿರ್ಮಾಣ ಕಾರ್ಯ ಅಂತಿಮ ಹಂತದಲ್ಲಿರುವುದರಿಂದ ಸರ್ಕಾರದ ಅನುಮೋದನೆ ಕಾಯ್ದಿರಿಸಿ "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂಬ ಹೆಸರನ್ನು ಜಾರಿ ಮಾಡಲು ಸದಸ್ಯರುಗಳು ಸಲಹೆ ನೀಡಿದ ಹಿನ್ನೆಲೆಯಲ್ಲಿ, ಸರ್ಕಾರದ ವಿವಿಧ ಇಲಾಖೆಗಳಲ್ಲಿ, ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲ ಮಹಾವಿದ್ಯಾಲಯಗಳಲ್ಲಿ ಹಾಗೂ ವಿಶ್ವವಿದ್ಯಾಲಯದ ಆಡಳಿತ ವ್ಯವಹಾರಗಳಲ್ಲಿ ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಜಾರಿ ಮಾಡಲು ಸಭೆಯು ತೀರ್ಮಾನಿಸಿತು ಮತ್ತು ಸದರಿ ಹೆಸರು ಸರಿಪಡಿಸುವ ಪ್ರಕ್ರಿಯೆ ಅನುಪಾಲಿಸಲು ಮುಂದಿನ ಅಧಿವೇಶನದಲ್ಲಿ ಕಾರ್ಯಗತಗೊಳಿಸಿಕೊಳ್ಳಲು ಸಭೆ ತೀರ್ಮಾನಿಸಿತು.** |
| 15 | 2026/05/15 | 2025-26 ಮತ್ತು 2026-27 ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯ ಅಡಿಯಲ್ಲಿ ಹಮ್ಮಿಕೊಳ್ಳಲು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು |
| | **ತೀರ್ಮಾನ** | **ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಪ.ಜಾ/ಪ.ಪಂ ಪೂರ್ಣಾವಧಿಯ ಸಂಶೋಧನಾ ವಿದ್ಯಾರ್ಥಿಗಳಿಗೆ 2024-25 ನೇ ಸಾಲಿಗೆ ಎಸ್.ಸಿ.ಪಿ ಯೋಜನೆಯಡಿಯಲ್ಲಿ ರೂ. 28.80 ಲಕ್ಷ ಹಾಗೂ ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ರೂ. 3.60 ಲಕ್ಷ ಒಟ್ಟಾರೆ ರೂ. 32.40 ಲಕ್ಷ** |

| | | |
|---|---|---|
| | | ಅನುದಾನ ಬಿಡುಗಡೆ ಮಾಡಿದ್ದು ಅದರಲ್ಲಿ ಪ.ಜಾ/ಪ.ಪಂ ಪೂರ್ಣಾವಧಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಪ್ರತಿ ಪೂರ್ಣಾವಧಿ ಸಂಶೋಧನಾರ್ಥಿಗೆ ರೂ. 10000/-ಗಳ ಮಾಸಿಕ ಸಹಾಯಕ ಧನ ಸಂದಾಯ ಮಾಡಿ ಟಿ.ಎಸ್.ಪಿ ಖಾತೆಯಲ್ಲಿ ರೂ.34,70,370 ಮತ್ತು ಎಸ್.ಸಿ.ಪಿ ಖಾತೆಯಲ್ಲಿ ರೂ. 57,66,152/-ಗಳು ಉಳಿದಿರುತ್ತವೆ. ಸದರಿ ಉಳಿದ ಅನುದಾನಗಳಲ್ಲಿ 2025-26 ಹಾಗೂ 2026-27 ನೇ ಶೈಕ್ಷಣಿಕ ಸಾಲಿನ ಪೂರ್ಣಾವಧಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾಸಿಕ ಸಹಾಯಕ ಧನ ನೀಡಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಪ.ಜಾ/ಪ.ಪಂ ಪೂರ್ಣಾವಧಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ಸಾದಿಲವಾರು ವೆಚ್ಚ ಮಹಾಪ್ರಬಂಧದ ಮಂಡಣೆಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಹಣಕಾಸಿನ ನೆರವು ಮತ್ತು ಶೇ. 50 ರಷ್ಟು ಶುಲ್ಕ ಮರುಪಾವತಿಗೆ(ಕುಟುಂಬದ ವಾರ್ಷಿಕ ಆದಾಯ ರೂ. 2,50,000 ರಿಂದ ರೂ. 10,00,000/- ಒಳಗೆ ಇರತಕ್ಕದ್ದು) ಸಭೆಯು ಅನುಮೋದಿಸಿತು. ಈ ಕಲ್ಯಾಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಮೀಸಲಿರಿಸಿದ ಶೇ. 24.10 ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಭೆಯು ಅನುಮೋದನೆ ನೀಡಿತು.. |
| 16 | 2026/05/16 | ಹೀರೇಬಾಗೇವಾಡಿಯ ಹೊಸ ವಸತಿನಿಲಯದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿಯಲ್ಲಿ ಪ್ರವೇಶ ಒದಗಿಸುವ ಕುರಿತು. |
| | **ತೀರ್ಮಾನ** | **ಹೀರೇಬಾಗೇವಾಡಿಯ ಹೊಸ ವಸತಿನಿಲಯದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿಯಲ್ಲಿ ಪ್ರವೇಶ ಒದಗಿಸುವ ಕುರಿತು ಜಿಲ್ಲಾ ಹಿಂದುಳಿದ ಕಲ್ಯಾಣ ಅಧಿಕಾರಿಗಳು, ಬೆಳಗಾವಿ, ಲೋಕೋಪಯೋಗಿ ಇಲಾಖೆಯೊಂದಿಗೆ ತಕ್ಷಣ ಸಭೆ ಜರುಗಿಸಿ ಪೂರ್ಣ ಮಾಹಿತಿ ಪಡೆದು ತಕ್ಷಣ ಅಗತ್ಯ ಕ್ರಮ ಜಗುಗಿಸಲು ಸಭೆಯು ತೀರ್ಮಾನಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು** | | |
| 17 | 2026/05/I | ಡಾ. ಡಿ. ಗೌತಮ, ಸಹಾಯಕ ಪ್ರಾಧ್ಯಾಪಕರು, ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿದ ಸಹಾಯಕ ಪಾಧ್ಯಾಪಕರ ಹುದ್ದೆಗೆ ತಾಂತ್ರಿಕ ರಾಜೀನಾಮೆ ನೀಡಿರುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ಡಾ. ಡಿ. ಗೌತಮ, ಇವರು ಸಮೂಚಿತ ಮಾರ್ಗವಾಗಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ ಇಲ್ಲಿಗೆ ಅರ್ಜಿ ಸಲ್ಲಿಸಿ Tourism and Hotel Management ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ನೇಮಕ ಹೊಂದಿದ್ದರಿಂದ ಕೆ.ಸಿ.ಎಸ್.ಆರ್.ನಿಯಮಾವಳಿಗಳ ನಿಯಮ 252(ಬಿ) ಅನ್ವಯ ದಿನಾಂಕ: 07.11.2023 ರಂದು ಬಿಡುಗಡೆಗೊಳಿಸಲಾಗಿದೆ. ಸದರಿಯವರ ಲೀನ್ ಅವಧಿಯು ದಿನಾಂಕ: 07.11.2025 ರಂದು ಮುಕ್ತಾಯಗೊಂಡಿರುತ್ತದೆ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬಿಡುಗಡೆ ಪಡೆಯಲು ತಾಂತ್ರಿಕ ರಾಜೀನಾಮೆ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ತಾಂತ್ರಿಕ ರಾಜೀನಾಮೆಯನ್ನು ಸಭೆಯು ಅಂಗೀಕರಿಸಿ ಅನುಮೋದನೆ ನೀಡಿತು.** |
| 18 | 2026/05/II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ PMKVY 4.0(Short-Term Training-STT) ಯೋಜನೆಯ ಅನುಷ್ಠಾನದಲ್ಲಿ ಎದುರಾಗಿರುವ ಸವಾಲುಗಳು ಮತ್ತು ಯೋಜನೆಯನ್ನು ಸ್ಥಗಿತಗೊಳಿಸುವ(Withdrawal) ನಿರ್ಣಯದ ಕುರಿತು ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರುವ ಕುರಿತು. |

| | | |
|---|---|---|
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಡಿಯಲ್ಲಿನ 25 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ PMKVY 4.0(Short-Term Training-STT) ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ, ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರಲು ವಿವಿಧ ಕಾಲೇಜುಗಳು ಸಲ್ಲಿಸಿದ ಮನವಿ ಪತ್ರಗಳು ಮತ್ತು ವಾಸ್ತವಿಕ ಅಂಶಗಳ ಆಧಾರದ ಮೇಲೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 23.04.2026 ರಂದು ಸಭೆಯನ್ನು ಆಯೋಜಿಸಲಾಗಿತ್ತು. ಯೋಜನೆಯ ಅನುಷ್ಠಾನದಲ್ಲಿ ಎದುರಾಗಿರುವ ಸವಾಲುಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ ಸಭೆಯ ನಡಾವಳಿಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| 19 | 2026/04/III | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 06.04.2026 ರ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾದ ಕಾಮಗಾರಿಯ ಹೆಸರನ್ನು ಪರಿಷ್ಕರಿಸಿ ಅನುಮೋದನೆ ನೀಡುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2025-26 ನೇ ಸಾಲಿನ 3ನೇ Works Committee ಹಾಗೂ 06-04-2026 ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾದ ಕಾಮಗಾರಿಯಾದ "Construction of Dry wall partitions in phase-1 buildings at premises of New Campus, Hirebagewadi, Belagavi" ಎಂದು ಇರುವ ಕಾಮಗಾರಿಯ ಹೆಸರನ್ನು "Construction of Dry wall partitions and other renovation works for various departments in phase-1 buildings New Campus, Hirebagewadi,Sangolli Rayanna Constituent College & Main Campus Bhutaramanahatti of Rani Channamma University Belagavi." ಎಂದು ಕಾಮಗಾರಿಯ ಹೆಸರನ್ನು ಪರಿಷ್ಕರಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| 20 | 2026/05/IV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿ ನೂತನ ಆವರಣದ ಕಟ್ಟಡ ಕಾಮಗಾರಿ ಗುಣಮಟ್ಟ ಪರಿಶೀಲನಾ ಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸುವ ಕುರಿತು |
| | **ತೀರ್ಮಾನ** | **ಮುಂದೂಡಲಾಯಿತು.** |
| 21 | 2026/05/V | ಹಿರೇಬಾಗೇವಾಡಿಯಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ಕೈಗೊಳ್ಳುತ್ತಿರುವ ಸಿವಿಲ್ ಕಾಮಗಾರಿಗಳನ್ನು ಪರಿಷ್ಕೃತ ಅಂದಾಜುಗಳಂತೆ ಅನುಷ್ಠಾನಗೊಳಿಸುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ನೂತನ ಆವರಣ, ಹಿರೇಬಾಗೇವಾಡಿಯಲ್ಲಿ ಪ್ರಸ್ತುತ ಮುಖ್ಯ ರಸ್ತೆ, ಅಂತರಿಕ ಮುಖ್ಯ ರಸ್ತೆ, ನೀರು ಸರಬರಾಜು ಕಾಮಗಾರಿ ಹಾಗೂ STP ಸಿವಿಲ್ ಕಾಮಗಾರಿಗಳು ಕಾರ್ಯಪ್ರಗತಿಯಲ್ಲಿರುತ್ತವೆ. ಸದರಿ ಆಂತರಿಕ ರಸ್ತೆ ಕಾಮಗಾರಿಗಳಲ್ಲಿ ಸಂಬಂಧಿಸಿದ Retaining Wall ಕಾರ್ಯವನ್ನು ಅನುಷ್ಠಾನಗೊಳಿಸಬೇಕಿದ್ದು, ಅನಗತ್ಯ Retaining wall ಕಾಮಗಾರಿಯನ್ನು (Girls Hostel) ಮುಂಭಾಗದಲ್ಲಿನ ಹಾಗೂ Library ಕಟ್ಟಡದ ಮುಂಭಾಗದ Retaining wall) ರದ್ದುಪಡಿಸಲು ಮತ್ತು ಸದರಿ Retaining wall ಕಾಮಗಾರಿಗಳನ್ನು ಅವಶ್ಯಕತೆಗೆ ತಕ್ಕಂತೆ ಮಾತ್ರ ಅನುಷ್ಠಾನಗೊಳಿಸಲು ಹಾಗೂ ಬೆಂಡಿಗೇರಿ ಮೂಲಕ Girls Hostel ಹತ್ತಿರದಿಂದ ವಿಶ್ವವಿದ್ಯಾಲಯಕ್ಕೆ ಸಂಪರ್ಕ ಕಲ್ಪಿಸಲು ಈ ಮೊದಲಿದ್ದ ಆಂತರಿಕ ರಸ್ತೆಯನ್ನು ರದ್ದುಪಡಿಸಿ, ಸದರಿ ಬೆಂಡಿಗೇರಿ ಮೂಲಕ ಕೈಗೊಳ್ಳುತ್ತಿರುವ CC ಆಂತರಿಕ ರಸ್ತೆಯನ್ನು ನೇರವಾಗಿ APMC ಪಕ್ಕದಿಂದ ಸಂಪರ್ಕ ಹೊಂದು ಮುಖ್ಯ ರಸ್ತೆಗೆ(ಕೆರೆಯ ಪಕ್ಕದಲ್ಲಿ) ಸಂಪರ್ಕ ಕಲ್ಪಿಸುವ CC ರಸ್ತೆ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಈ ಹಂತದಲ್ಲಿ ಈಗಾಗಲೇ ಸಿಂಡಿಕೇಟ್ ಅನುಮೋದನೆ ನೀಡಿದ್ದು, ಅನುಮೋದಿತ ಹಣಕಾಸು ಮಿತಿಯೊಳಗಾಗಿ ಕಾಮಗಾರಿಯ ಮೊತ್ತದಲ್ಲಿ ಸಾಧ್ಯವಾದಷ್ಟು ಉಳಿತಾಯಗೊಳಿಸುವಂತೆ** |

| | | |
|---|---|---|
| | | **ಕ್ರಮವಹಿಸಿ, ಅನಗತ್ಯವಿರುವ ಕಾಮಗಾರಿಗಳನ್ನು ಕಡಿತಗೊಳಿಸಿಕೊಂಡು ಅವಶ್ಯಕತೆಯಿದ್ದಲ್ಲಿ ಮಾತ್ರ EIRL & Work slip ಪ್ರಕಾರ ಸರಿದೂಗಿಸಿ ಸದರಿ ಕಾಮಗಾರಿಗಳ ಪರಿಷ್ಕೃತ ಅಂದಾಜುಗಳಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| 22 | 2026/05/VI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿಗೆ ಕುಡಿಯುವ ನೀರಿಗಾಗಿ ಪೈಪಲೈನ್ ಕಾಮಗಾರಿ ಕೈಗೊಳ್ಳುವ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ವಿದ್ಯಾರ್ಥಿಗಳಿಗೆ, ಮಹಾವಿದ್ಯಾಲಯದ ಸಿಬ್ಬಂದಿಗಳಿಗೆ ಹಾಗೂ ಮಹಾವಿದ್ಯಾಲಯಕ್ಕೆ ಕಾರ್ಯನಿಮಿತ್ತ ಆಗಮಿಸುವ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಬೆಳಗಾವಿ ಮಹಾನಗರ ಪಾಲಿಕೆಯ ಪೈಪಲೈನ್ ಜಾಲದಿಂದ ಮಹಾವಿದ್ಯಾಲಯದ ಒಳಭಾಗದಲ್ಲಿರುವ ನೀರಿನ ತೊಟ್ಟಿ(ಸಂಪ್) ಯವರೆಗೆ "Providing Pipeline works from Corporation source to sump and other minor works at SRFGCC, Belagavi" ಎಂಬ ಕಾಮಗಾರಿಯನ್ನು ಹಾಗೂ ಇನ್ನಿತರ ಸಣ್ಣಪುಟ್ಟ ಕಾಮಗಾರಿಗಳನ್ನು ಅಂದಾಜು ವೆಚ್ಚ ರೂ. 2.00 ಲಕ್ಷ ರೂಪಾಯಿಗಳಲ್ಲಿ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 23 | 2026/05/VII | ಪ್ರೊ. ಜೆ. ಮಂಜಣ್ಣ ರಸಾಯನಶಾಸ್ತ್ರ ವಿಭಾಗ, ಇವರು South Wales ವಿಶ್ವವಿದ್ಯಾಲಯ, ಹಾಗೂ ಡಾ.ನಂದಿನಿ ದೇವರಮನಿ, ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗ, ಇವರು ಕಾರ್ಡಿಫ್ ವಿಶ್ವವಿದ್ಯಾಲಯ, ಇಂಗ್ಲೆಂಡಿಗೆ ಸಂಶೋಧನೆಗಾಗಿ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು. |
| | **ತೀರ್ಮಾನ** | **ಪ್ರೊ. ಜೆ. ಮಂಜಣ್ಣ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಹಾಗೂ ಡಾ.ನಂದಿನಿ ದೇವರಮನಿ, ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗ, ಇವರು ಕಾರ್ಡಿಫ್ ವಿಶ್ವವಿದ್ಯಾಲಯ, ಇವರುಗಳ ಸಂಶೋಧನಾ ಯೋಜನೆಯು Global Wales-Karnataka Partnership Fund Initiative through KSHEC ನಿಂದ ಮಾನ್ಯತೆ ಪಡೆದಿರುತ್ತದೆ. ಸದರಿ ಯೋಜನೆಯ ಅನುಷ್ಠಾನದ ನಿಯಮಾನುಸಾರ, ಪ್ರೊ. ಜೆ. ಮಂಜಣ್ಣ ಇವರಿಗೆ ಸಂಶೋಧನೆ ನಡೆಸಲು ದಿನಾಂಕ: 18.06.2026 ರಿಂದ 30.06.2026 ರ ವರೆಗೆ South Wales ವಿಶ್ವವಿದ್ಯಾಲಯ, ಇಂಗ್ಲೆಂಡಿಗೆ ಹಾಗೂ ಡಾ. ನಂದಿನಿ ದೇವರಮನಿ, ಇವರಿಗೆ ದಿನಾಂಕ: 10.06.2026 ರಿಂದ 25.06.2026 ರವರೆಗೆ ಕಾರ್ಡಿಫ್ ವಿಶ್ವವಿದ್ಯಾಲಯ, ಇಂಗ್ಲೆಂಡ್‌ಗೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಲು ಸಭೆಯು ಅನುಮೋದನೆ ನೀಡಿತು.** |
| 24 | 2026/05/VIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ನೇರ ನೇಮಕಾತಿ ಹಾಗೂ ಸಿ.ಎ.ಎಸ್ (CAS) ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡುವ ಸಂದರ್ಭದಲ್ಲಿ ಆಯ್ಕೆ ಸಮಿತಿಗೆ ಅಗತ್ಯವಿರುವ ಬಿ.ಓ.ಎ.(BOA) ವಿಷಯ ತಜ್ಞರ ಮತ್ತು ಪರೀಕ್ಷಾ ವಿಭಾಗದ ಕಾರ್ಯಗಳಿಗೆ ಅಗತ್ಯವಿರುವ ಬಿ.ಓ.ಇ.(BOE) ಸದಸ್ಯರ ನೇಮಕಾತಿ ಕುರಿತು. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ನೇರ ನೇಮಕಾತಿ ಹಾಗೂ ಸಿ.ಎ.ಎಸ್ (CAS) ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡುವ ಸಂದರ್ಭದಲ್ಲಿ ಆಯ್ಕೆ ಸಮಿತಿಗೆ ಅಗತ್ಯವಿರುವ ಬಿ.ಓ.ಎ.(BOA) ವಿಷಯ ತಜ್ಞರ ಹೆಸರುಗಳನ್ನು ಮತ್ತು ಪರೀಕ್ಷಾ ವಿಭಾಗದ ಕಾರ್ಯಗಳಿಗೆ ಅಗತ್ಯವಿರುವ ಬಿ.ಓ.ಇ.(BOE) ಸದಸ್ಯರನ್ನು ನೇಮಿಸಲು, ಕರ್ನಾಟಕ ರಾಜ್ಯದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ (Central Universities) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅರ್ಹ ಪ್ರಾಧ್ಯಾಪಕರನ್ನು BOA ಮತ್ತು BOE ಸಮಿತಿಗಳಿಗೆ ಸದಸ್ಯರನ್ನಾಗಿ ನೇಮಿಸಲು ಮಾನ್ಯ ಕುಲಪತಿಗಳ ಮಾರ್ಗದರ್ಶನದಲ್ಲಿ ಮುಖ್ಯಸ್ಥರು ಪಟ್ಟಿ ತಯಾರಿಸಿಕೊಂಡು ನಂತರ ನಿಯಮಾನುಸಾರ ಅನುಮೋದನೆಗೆ ಸಲ್ಲಿಸಲು ಅವಕಾಶ ಕಲ್ಪಿಸಲು ಸಭೆಯು ಅನುಮೋದನೆ ನೀಡಿತು.** |

| | | |
|---|---|---|
| 25 | 2026/05IX | ಪರೀಕ್ಷಾ ಮೌಲ್ಯಮ್ಯಾಪನ ಕಾರ್ಯವನ್ನು Digital Evaluation ಮುಖಾಂತರ ಜಾರಿಗೊಳಿಸುವ ಕುರಿತು |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಮೌಲ್ಯಮಾಪನ ಕಾರ್ಯವನ್ನು Digital Evaluation ಮುಖಾಂತರ ಜಾರಿಗೊಳಿಸಲು KTPP ನಿಯಮಾವಳಿಗಳನ್ನು ಅಕರಿಸಿ ಟೆಂಡರ್ ಆಹ್ವಾನಿಸಲು ಸಭೆಯು ತೀರ್ಮಾನಿಸಿತು.** |
| 26 | 2026/05/X | ಹೀರೆಬಾಗೇವಾಡಿಯಲ್ಲಿಯ ಪರೀಕ್ಷಾ ವಿಭಾಗದ ಕಟ್ಟಡದಲ್ಲಿಯ Auditorium ಕುರಿತು. |
| | **ತೀರ್ಮಾನ** | **ಹೀರೆಬಾಗೇವಾಡಿಯ ನೂತನ ಕಟ್ಟಡದಲ್ಲಿರುವ ಪರೀಕ್ಷಾ ವಿಭಾಗದ First Floor ನಲ್ಲಿ Auditorium ಇದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜೀನಿಯರಿಂಗ ವಿಭಾಗ ಇವರಿಂದ ನಿರ್ಮಾಣವಾಗುತ್ತಿದ್ದು, ಸದರಿ Auditorium ನ Interier Work(Acoustic Wall Treatment, Acoustic Wall Cladding, Acoustic Gride Cealing, Accostic Flowing Matt, Stage Wooden Flooring, Auditorium chair etc) ಕಾರ್ಯಗಳನ್ನು ಪರಿಷ್ಕೃತ ಅಂದಾಜು ರೂ. 3 ಕೋಟಿ ರೂಪಾಯಿಗಳಲ್ಲಿ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 27 | 2026/05/XI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿ ಅಧೀಕ್ಷಕರ ಪರಿವೀಕ್ಷಣಾ ಅವಧಿಯನ್ನು ಘೋಷಣೆ ಕುರಿತು ಚರ್ಚಿಸುವ ಬಗ್ಗೆ. |
| | **ತೀರ್ಮಾನ** | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ಕಛೇರಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ. ತುಳಸಾದೇವಿ ಕನ್ನಾಳ ಇವರು ರಾಜಪಿಯ ನೇಮಕಾತಿ ಆದೇಶದಂತೆ ಕಛೇರಿ ಅಧೀಕ್ಷಕರ ಹುದ್ದೆಗೆ ನೇಮಕ ಹೊಂದಿ ದಿನಾಂಕ: 02-11-2023 ರಂದು ಕರ್ತವ್ಯಕ್ಕೆ ಹಾಜರಾಗಿದ್ದು ದಿನಾಂಕ: 02.11.2025 ರಂದು ಎರಡು ವರ್ಷಗಳ ಅವಧಿ ಪೂರ್ಣಗೊಳ್ಳುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ(KCSR) 8 ಉಪನಿಯಮ 37 ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪರೀಕ್ಷಾರ್ಥ ಅವಧಿ ನಿಯಮಗಳು 1977 ರಂತೆ ಸದರಿಯವರ ಪರಿವೀಕ್ಷಣಾ ಅವಧಿ ಘೋಷಣೆ ಮಾಡುವ ಕುರಿತು ಹಿಂದಿನ ಸಭೆಯಲ್ಲಿ ನೇಮಕಾತಿಗೆ ಸಂಬಂಧಿಸಿ ಹಿಂದಿನ ಕುಲಸಚಿವರ ವಿರುದ್ಧ ದೂರು ಇರುವ ಬಗ್ಗೆ, ಕಛೇರಿಯಲ್ಲಿ ದೂರು ಸ್ವೀಕೃತವಾಗಿರುವ ಬಗ್ಗೆ ಕುಲಸಚಿವರು ಸಭೆಯ ಗಮನಕ್ಕೆ ತಂದರು. ಚರ್ಚಿಸಿದ ಸಭೆಯು ನಿಯಮಾನುಸಾರ ಪರಿಶೀಲಿಸಿ ಪರಿವೀಕ್ಷಣಾ ಅವಧಿ ಘೋಷಿಸಲು ಕ್ರಮ ವಹಿಸಲು ತೀರ್ಮಾನಿಸಿತು.** |
| 28 | 2026/05/XII | AI ತಂತ್ರಜ್ಞಾನದ ಮೂಲಕ ಮೌಲ್ಯಮಾಪನ ಕಾರ್ಯ ಕೈಗೊಳ್ಳುವ ಕುರಿತು |
| | **ತೀರ್ಮಾನ** | **ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನವನ್ನು AI ತಂತ್ರಜ್ಞಾನದ ಮೂಲಕ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.** |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

**ಇವರಿಗೆ,**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ

**ಪ್ರತಿ ಮಾಹಿತಿಗಾಗಿ :** ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.